**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್.ಸಿ.ನಂ. 5002/2025**

**ಸಿ.ಡಬ್ಲ್ಯೂಃ–13** **ಪಿ.ಡಬ್ಲ್ಯೂಃ–14**

**ದಿಃ 09.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಪೂರ್ಣ ಹೆಸರು | : | ಮುಸ್ತಕೀಮ್ ಆಸೀಫ್ ಮುಲ್ಲಾ |
| ವಯಸ್ಸು | : | 20 ವರ್ಷ. |
| ಉದ್ಯೋಗ | : | ವಿದ್ಯಾಭ್ಯಾಸ |
| ವಾಸಸ್ಥಳ | : | ನಿಪ್ಪಾಣಿ. |

**ಮುಖ್ಯ ವಿಚಾರಣೆಃ–** ಮಾನ್ಯ ಸರಕಾರಿ ಅಭಿಯೋಜಕರವರಿಂದಃ–

1) ಚಾ.ಸಾ.1, 17, ಮೃತ ಅಶ್ರಫಅಲಿ ಗೊತ್ತು. ನ್ಯಾಯಾಲಯದ ಮುಂದೆ ವಿ.ಸಿ. ಮುಖಾಂತರ ಹಾಗೂ ಪ್ರತ್ಯಕ್ಷವಾಗಿ ಹಾಜರಿರುವ ಆರೋಪಿತರನ್ನು ಈ ಮೊದಲು ನೋಡಿಲ್ಲ.

2) ಅಶ್ರಫಅಲಿ ಈಗ್ಗೆ ಒಂದೂವರೆ ವರ್ಷದ ಹಿಂದೆ ನಿಪ್ಪಾಣಿಯ ಭೀಮ ನಗರದಲ್ಲಿ ಯಾರೋ ಕೊಲೆ ಮಾಡಿದ್ದರಿಂದ ಮೃತಪಟ್ಟಿದ್ದಾನೆ. ಆತನ ಸಾವಿಗೆ ಯಾರು ಕಾರಣ ಅಂತಾ ಗೊತ್ತಿಲ್ಲ. ಆರೋಪಿತರು ಆತನನ್ನು ಕೊಲೆ ಮಾಡಿಲ್ಲ. ಆರೋಪಿತರು ಹಾಗೂ ನಮ್ಮ ಮಧ್ಯೆ ಹಳೆಯ ದ್ವೇಷ ಯಾವುದು ಇರಲಿಲ್ಲ. ಆರೋಪಿತರು ನಮ್ಮ ಮೇಲೆ ಯಾವುದೇ ಕಾಲಕ್ಕೂ ವೈರತ್ವ ಸಾಧಿಸುತ್ತಿರಲಿಲ್ಲ.

3) ಒಂದೂವರೆ ವರ್ಷದ ಹಿಂದೆ ರಾತ್ರಿ 08.30 ಗಂಟೆ ಸುಮಾರಿಗೆ ಅಶ್ರಫಅಲಿಗೆ ಭೀಮ ನಗರದಲ್ಲಿ ಯಾರೋ ಹೊಡೆದಿದ್ದಾರೆ ಅಂತಾ ಗೊತ್ತಾಗಿ ಹೋಗಿ ನೋಡಿದಾಗ ಆತನ ತಲೆಗೆ, ಮೈಕೈ ಮೇಲೆ ಗಾಯಗಳಾಗಿದ್ದವು. ಆತ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ನಂತರ ಆತನನ್ನು ನಿಪ್ಪಾಣಿ ಸರ್ಕಾರಿ ಆಸ್ಪತ್ರೆಗೆ, ಹೆಚ್ಚಿನ ಚಿಕಿತ್ಸೆಗೆ ಕೊಲಾಪೂರ C. P. R. ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದೆವು. ರಾತ್ರಿ 10.30 ಗಂಟೆ ಸುಮಾರಿಗೆ ಚಿಕಿತ್ಸೆ ಫಲಿಸದೇ ಅಶ್ರಫಅಲಿ ಮೃತಪಟ್ಟ ವಿಚಾರವಾಗಿ ಚಾ.ಸಾ.1 ದೂರು ಕೊಟ್ಟ ಬಗ್ಗೆ ಗೊತ್ತಿಲ್ಲ. ಆ ಕುರಿತು ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ್ದು, ಪರಿಶೀಲಿಸಿ, ಅನುಮತಿಸಲಾಯಿತು)**

**ಪಾಟೀ ಸವಾಲುಃ- ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

1) ಚಾ.ಸಾ.22 ಆಯಾನ ಎಕ್ಸಂಬಿ ನನ್ನ ಗೆಳೆಯ ಎಂದರೆ ಸರಿ. ದಿನಾಂಕಃ 22.10.2024 ರಂದು ಚಾ.ಸಾ.22 ರವರ ಜನ್ಮ ದಿನ ಇತ್ತು ಎಂದರೆ ಸರಿಯಲ್ಲ. ಆ ದಿನ ನಾನು, ಚಾ.ಸಾ.1, ಅಶ್ರಫಅಲಿ ಹಾಗೂ ನನ್ನ ಗೆಳೆಯರಾದ ಚಾ.ಸಾ.12, 14 ರಿಂದ 16 ರವರು ಕೂಡಿಕೊಂಡು ನಿಪ್ಪಾಣಿಯ ಭೀಮ ನಗರದಲ್ಲಿರುವ ಮುನಸಿಪಲ್ ಶಾಲೆಯ ಹಿಂದಿನ ಬದಿಯಲ್ಲಿರುವ ಜಲಕುಂಭದ ಕಟ್ಟೆಯ ಮೇಲೆ ಕೇಕ್ ಕತ್ತರಿಸುವ ಕಾರ್ಯಕ್ರಮ ಇಟ್ಟುಕೊಂಡು ಅಲ್ಲಿ ಸೇರಿದ್ದೇವು ಎಂದರೆ ಸರಿಯಲ್ಲ. ಅಲ್ಲಿಗೆ ಆಯಾನ್ ಇನ್ನೂ ಬಂದಿರಲಿಲ್ಲ ಎಂದರೆ ಸರಿಯಲ್ಲ. ಆಗ ಆರೋಪಿತರೆಲ್ಲ

ತಮ್ಮ ಕೈಯಲ್ಲಿ ನನಗೀಗ ತೋರಿಸಿದ ಮು.ಮಾ.1 ರಿಂದ 5 ವಸ್ತುಗಳಾದ ಮಚ್ಚು, ತಲವಾರಗಳು, ಗುಪ್ತಿ ಆಯುಧವನ್ನು ಹಿಡಿದುಕೊಂಡು ಚಾ.ಸಾ.1 ಹಾಗೂ ಅಶ್ರಫಅಲಿ ಮೇಲೆ ಹಲ್ಲೆ ಮಾಡಲು ಬಂದರು ಎಂದರೆ ಸರಿಯಲ್ಲ. ಆಗ ನಾವೆಲ್ಲ ಓಡಿ ಹೋದೆವು. ಅಶ್ರಪಅಲಿಗೆ ಈ ಮುಂಚೆ ಕಾಲಿಗೆ ಪೆಟ್ಟಾಗಿದ್ದರಿಂದ ಓಡಲಾಗದೇ ಆರೋಪಿತರ ಕೈಯಲ್ಲಿ ಸಿಕ್ಕಿಹಾಕಿಕೊಂಡ ಎಂದರೆ ಸರಿಯಲ್ಲ. ಆಗ ಆರೋಪಿತರೆಲ್ಲ ಸೇರಿ ಅವರಿಗೆ ಮನಸ್ಸಿಗೆ ಬಂದಂತೆ ಸದರಿ ಆಯುಧಗಳಿಂದ ಆತನ ತಲೆ, ಬೆನ್ನು ಹಾಗೂ ಮೈಕೈ ಮೇಲೆಲ್ಲಾ ಹೊಡೆದು ಗಂಭೀರ ಸ್ವರೂಪದ ಗಾಯ ಪಡಿಸಿದರು ಎಂದರೆ ಸರಿಯಲ್ಲ. ಆಗ ರಾತ್ರಿ 08.20 ಗಂಟೆಯಾಗಿತ್ತು ಹಾಗೂ ಪುರಸಭೆಯ ಲೈಟ ಬೆಳಕು ಇತ್ತು ಎಂದರೆ ಸರಿಯಲ್ಲ. ನಂತರ ಆರೋಪಿತರೆಲ್ಲ ಮೋಟಾರಸೈಕಲಗಳನ್ನು ತೆಗೆದುಕೊಂಡು ಓಡಿ ಹೋದರು ಎಂದರೆ ಸರಿಯಲ್ಲ. ಅವರ ಕೈಗಳಲ್ಲಿದ್ದ ಆಯುಧಗಳನ್ನು ತೆಗೆದುಕೊಂಡು ಹೋದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ನನಗೀಗ ತೋರಿಸಿದ ಮು.ಮಾ.6 ಕೊಡಲಿ ಗುನ್ಹಾ ಸ್ಥಳದಲ್ಲಿ ಬಿದ್ದಿತ್ತು ಎಂದರೆ ಸರಿಯಲ್ಲ. ನಂತರ ಚಾ.ಸಾ.1 ರವರು ಆತನ ತಂದೆಯನ್ನು ಫೋನ ಮಾಡಿ ಕರೆಸಿಕೊಂಡು ಅಶ್ರಫಅಲಿಯನ್ನು ಸಂಬಂಧಿಕರ ಸಹಾಯದಿಂದ ನಿಪ್ಪಾಣಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ಹೆಚ್ಚಿನ ಉಪಚಾರಕ್ಕೆ ಕೊಲಾಪೂರದ ಸಿ. ಪಿ. ಆರ್. ಆಸ್ಪತ್ರೆಗೆ ಕಳುಹಿಸಿ ಕೊಟ್ಟರು ಎಂದರೆ ಸರಿಯಲ್ಲ. ನಂತರ ಚಿಕಿತ್ಸೆ ಫಲಕಾರಿಯಾಗದೇ ಅಶ್ರಫಅಲಿ ಮೃತಪಟ್ಟ ಅಂತಾ ಗೊತ್ತಾಯಿತು ಹಾಗೂ ಆ ಕುರಿತು ಆತನ ಸಹೋದರ ಚಾ.ಸಾ.1 ದೂರು ಕೊಟ್ಟ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ದಿನಾಂಕಃ 03.10.2024 ರಂದು ನನಗೀಗ ವಿವರವಾಗಿ ಓದಿ ಹೇಳಲಾದ ಸನ್ 2022 ರಲ್ಲಿ ......... ಸರಿ ಇರುತ್ತದೆ ಎಂಬುದಾಗಿ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿ.ಪಿ.50 ಅಂತಾ ಗುರುತಿಸಲಾಯಿತು. ನಂತರ ದಿನಾಂಕಃ 09.10.2024 ರಂದು

ನಾನು ಮತ್ತೇ ಠಾಣೆಗೆ ಹಾಜರಾಗಿ 12, 13ನೇ ಆರೋಪಿತರು ಅಶ್ರಫಅಲಿಯ ಚಲನ ವಲನ ಕುರಿತು ಉಳಿದ ಆರೋಪಿತರಿಗೆ ಮಾಹಿತಿ ಕೊಟ್ಟು ಗುನ್ಹೆಯಲ್ಲಿ ಭಾಗಿಯಾಗಿದ್ದಾರೆಂದು ನನಗೀಗ ವಿವರವಾಗಿ ಓದಿ ಹೇಳಲಾದ "ಈಗ ತಾವು ................ ಈಗ ತಿಳಿಯಿತು" ಎಂಬುದಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿ.ಪಿ.51 ಎಂದು ಗುರುತಿಸಲಾಯಿತು.

2) ಸದರಿ ಎಲ್ಲ ವಿಚಾರ ಗೊತ್ತಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ– ಆರೋಪಿತರ ಪರ:– ಏನೂ ಇಲ್ಲ.**

**ಮರು ವಿಚಾರಣೆ** : ಇರುವುದಿಲ್ಲ.

(ಈ ಸಾಕ್ಷಿಯ ಸಾಕ್ಷ್ಯದ ಸಮಯದಲ್ಲಿ 1 ರಿಂದ 5, 7, 8 ನೇ ಆರೋಪಿತರನ್ನು ಕಾರಾಗೃಹದಿಂದ ವಿ. ಸಿ. ಮೂಲಕ ಹಾಜರಪಡಿಸಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.